20/2/13



## ಅಭಿನಂದನೆ

ವಿಪ್ರೋ ಸಂಸ್ಥೆ ಆಯೋಜಿಸಿದ್ದ ಪರಿಸರ ಸಂರಕ್ಷಣಾ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಆಲಮಟ್ಟಿಯ ಜವಾಹರ ನವೋದಯ ಶಾಲೆಯ ವಿದ್ಯಾರ್ಥಿ-ಸಿಬ್ಬಂದಿಯನ್ನು ವಿಜಾಪುರ ಜಿಲ್ಲಾಧಿಕಾರಿ ಶಿವಯೋಗಿ ಕಳಸದ ಅಭಿನಂದಿಸಿದರು.

ಸಂಯುಕ್ತ ಕರ್ನಾಟಕ । ಹುಬ್ಬಳ್ಳಿ । ಫೆಬ್ರವರಿ । 20 । 2013

## ವಿಜಾಪುರ

# ಆಲಮಟ್ಟಿ ನವೋದಯ ಶಾಲೆಗೆ ಪ್ರಶಸ್ತಿ

ವಿಜಾಪುರ, ಫೆ. 19: ವಿಪ್ರೋ ಸಂಸ್ಥೆ ಏರ್ಪಡಿಸಿದ ಪರಿಸರ ಸಂರಕ್ಷಣೆ ಸ್ಪರ್ಧೆಯಲ್ಲಿ ಆಲಮಟ್ಟಿಯ ಜವಾಹರ ನವೋದಯ ಶಾಲೆಗೆ ಪ್ರಶಸ್ತಿ ದೊರೆತಿದೆ.

ಶಾಲೆಯ ವಿದ್ಯಾರ್ಥಿ ಹಾಗೂ ಸಿಬ್ಬಂದಿಗೆ ಜಿಲ್ಲಾಧಿಕಾರಿ ಶಿವಯೋಗಿ ಕಳಸದ ಸನ್ಮಾನಿಸಿದರು. ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗುತ್ತಿ ಜಂಬುನಾಥ್, ಜಿಲ್ಲಾ ಪೊಲೀಸ್ ಅಧೀಕ್ಷಕ ಅಜಯ ಹಿಲೋರಿ ಮೊದಲಾದವರು ಉಪಸ್ಥಿತರಿದ್ದರು.

ವಿಪ್ರೋ ಸಂಸ್ಥೆ ಆಯೋಜಿಸಿದ ಪರಿಸರ ಸಂರಕ್ಷಣೆ ಸ್ಪರ್ಧೆಯಲ್ಲಿ ಸುಮಾರು 1300 ಶಾಲೆಗಳು ಭಾಗವಹಿಸಿದ್ದು, ಇದರಲ್ಲಿ 10 ಶಾಲೆಗಳನ್ನು ಆಯ್ಕೆ ಮಾಡಲಾಗಿದೆ. ಆಲಮಟ್ಟಿ ಜವಾಹರ ನವೋದಯ ಶಾಲೆಯ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ, ಸ್ವಚ್ಛತೆ, ಪರಿಸರದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಅಚ್ಚುಕಟ್ಟಾಗಿ ನೆರವೇರಿಸಿದ್ದಕ್ಕಾಗಿ ಪ್ರಶಸ್ತಿ ನೀಡಲಾಗಿದೆ. ಕಳೆದ ದಿ.16 ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಆಯ್ಕೆಯಾದ ಶಾಲೆಗಳಿಗೆ ವಿಪ್ರೋ ಸಂಸ್ಥೆಯ ಅಧ್ಯಕ್ಷ ಅಜೀಮ ಪ್ರೇಮಜಿ 1 ಲಕ್ಷ ರೂ. ನಗದು ಬಹುಮಾನ, ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಿದ್ದಾರೆ.

Samyukta Karnataka